

ಧರಿಸಿದ್ದರೆ, ಮತ್ತೊಂದು ಇಮೋಜಿಯ ಕಣ್ಣಿನಲ್ಲಿ ಬಿರು ಬೇಸಿಗೆಯಲ್ಲಿಯೂ ಕಣ್ಣಿನಿಂದ ಜಲಪಾತ. ಒಂದರ ಕಣ್ಣುಗುಡ್ಡೆಗಳು ಕೋಪಿಸಿಕೊಂಡು ಕಣ್ಣಿನ ಯಾವುದೋ ಮೂಲೆ ಸೇರಿಕೊಂಡಿದ್ದರೆ, ಇನ್ನೊಂದು ಹೆದರಿ ಕಂಗಾಲಾಗಿ ಮೂರ್ಛೆ ಹೋದವರ ಹಾಗೆ ಕಣ್ಣು ಬೆಳ್ಳಗೆ ಮಾಡಿರುತ್ತದೆ. ಮತ್ತೊಂದಕ್ಕೆ ಸತ್ತವರ ಹಾಗೆ ಕಣ್ಣುಗುಡ್ಡೆ ಮೇಲಕ್ಕೆ ಶಿಫ್ಟ್ ಆಗಿರುತ್ತದೆ.

ಇಮೋಜಿಗಳ ಬಾಯಿಯೂ ವೈವಿಧ್ಯಮಯ. ಕೆಲವು ಇಮೋಜಿಗಳ ಬಾಯಿ ಕಮಾನು ಆಕಾರದಲ್ಲಿದ್ದರೆ, ಕೆಲವದ್ದು ಉಲ್ಟಾ ಕಮಾನು ಅಥವಾ ಸ್ಟ್ರೈಟ್ ಇಂಗ್ಲಿಷ್ ಯು ಆಕಾರ. ಇನ್ನೊಂದರ ಬಾಯಿ ಲಿಮ್ಲೆಟ್ ಕ್ಯಾಂಡಿ ಆಕಾರದಲ್ಲಿ, ಮತ್ತೊಂದರ ಬಾಯಿ ಸರಳರೇಖೆ, ಮತ್ತೊಂದರದ್ದು ಲಡ್ಡು ಬಾಯೊಳಗೆ ಹೋಗುವಷ್ಟು ದೊಡ್ಡದಾಗಿ ತೆರೆದ ಬಾಯಿ. ಕೆಲವಂತೂ ಬಾಯಿಗೆ ಲಕ್ವಾ ಹೊಡೆದ ಹಾಗೆ ಸೊಟ್ಟ ಮಾಡಿರುತ್ತವೆ. ಮತ್ತೆ ಕೆಲವು ಇಮೋಜಿಗಳಂತೂ ನಾಲಿಗೆಯನ್ನು ನಾಯಿಯ ಹಾಗೆ ಸದಾ ಹೊರ ಚಾಚಿರುತ್ತವೆ. ಒಂದು ಇಮೋಜಿ ಬಾಯಿಗೆ ಮಾಸ್ಕ್ ಹಾಕಿಕೊಂಡು ಮತ್ತೆ ಮತ್ತೆ ಕೊರೊನಾದ ಕರಾಳ ದಿನಗಳನ್ನು ನೆನಪಿಸುತ್ತದೆ.

ಇದಿಷ್ಟು ಇಮೋಜಿಗಳ ರುಂಡದ ಬಗ್ಗೆಯಾದರೆ, ಕೆಲವೊಂದು ಇಮೋಜಿಗಳಿಗೆ ಪುಟ್ಟ ಪುಟ್ಟ ಅಂಗೈ ಕೂಡ ಇರುತ್ತದೆ. ಒಂದು ಇಮೋಜಿ ಈ ಅಂಗೈಗಳನ್ನು ಕೆನ್ನೆಯ ಮೇಲಿಟ್ಟುಕೊಂಡರೆ, ಇನ್ನೊಂದು ಬಾಯಿಯ ದುರ್ವಾಸನೆ ಬಾರದ ಹಾಗೆ ಬಾಯಿಗೆ ಅಡ್ಡ ಹಿಡಿದಿರುತ್ತೆ, ಮತ್ತೊಂದು ಭವಿಷ್ಯ ಕೇಳಲು ಹಸ್ತಸಾಮುದ್ರಿಕನಿಗೆ ತನ್ನ ಎರಡೂ ಹಸ್ತಗಳನ್ನು ತೋರಿಸುವಂತಿರುತ್ತದೆ.

ಈ ರುಂಡದ ಕಣ್ಣು, ಹುಬ್ಬು ಹಾಗೂ ಬಾಯಿಯ ಆಕಾರದ ಮೇಲೆ ಮತ್ತು ಅಂಗೈಗಳನ್ನು ಎಲ್ಲಿ ಹಿಡಿದುಕೊಂಡಿದೆ ಎನ್ನುವುದರ ಮೇಲೆ ಭಾವನೆಗಳು ಬದಲಾಗುತ್ತಾ ಹೋಗುತ್ತವೆ. ಕಣ್ಣು ಕಮಾನು ಆಕಾರದಲ್ಲಿದ್ದು ಅದರ ಬಾಯಿ ಉಲ್ಟಾ ಕಮಾನು ಆಕಾರದಲ್ಲಿದ್ದರೆ ಅದು ಮುಗುಳುನಗುವಷ್ಟು ಸಂತೋಷವನ್ನು, ಕಣ್ಣು ಕಮಾನು ಆಕಾರದಲ್ಲಿದ್ದು, ಬಾಯಿ ಲಿಮ್ಲೆಟ್ ಕ್ಯಾಂಡಿ ಆಕಾರದಲ್ಲಿದ್ದರೆ ಹಲ್ಲು ಕಿರಿದು ನಗುವುದನ್ನು, ರುಂಡ ಎಡಕ್ಕೆ ವಾಲಿ, ಹಲ್ಲು ಕಿರಿದು, ಗಣಿತದ ಚಿಹ್ನೆಗಳಂತಿರುವ ಕಣ್ಣಿನಿಂದ ಸಂತೋಷದ ಅಶ್ರುಗಳು ಸುರಿಯುತ್ತಿದ್ದರೆ ಅದು ನೆಲದ ಮೇಲೆ ಬಿದ್ದು ಹೊರಳಾಡುತ್ತ ನಗುವುದನ್ನು ವ್ಯಕ್ತಪಡಿಸುತ್ತದೆ.

ಹುಬ್ಬು ಸ್ವಲ್ಪ ಮೇಲೆ ಏರಿದ್ದು, ಬಾಯಿ ಕಮಾನು ಆಕಾರದಲ್ಲಿದ್ದರೆ ಅದು ನಿರಾಶೆಯನ್ನು, ಅದರ ಜೊತೆ ಒಂದೇ ಕಣ್ಣಲ್ಲಿ ಒಂದೇ ಒಂದು ಹನಿಯಷ್ಟು ಕಣ್ಣೀರಿದ್ದರೆ ದುಃಖವನ್ನು (ವಯಸ್ಸಾಗಿದ್ದರಿಂದ ಇದರ ಲ್ಯಾಕ್ರಿಮಲ್ ಗ್ಲಾಂಡ್ಸ್‌ನ– ಕಣ್ಣೀರು ತರಿಸುವ ಗ್ಲಾಂಡ್ಸ್‌ನ– ಕಾರ್ಯಕ್ಷಮತೆ ಕಡಿಮೆಯಾಗಿರುತ್ತದೆ, ಹಾಗಾಗಿ ಒಂದೇ ಹನಿ ಕಣ್ಣೀರು), ಒಂದು ಹುಬ್ಬು ಎಡಕ್ಕೆ ಇನ್ನೊಂದು ಬಲಕ್ಕೆ ವಾಲಿ, ಕಣ್ಣುಗಳು ನಿಮ್ಮನ್ನು ದಿಟ್ಟಿಸುತ್ತಾ, ಬಾಯಿ ಕಮಾನು ಆಕಾರದಲ್ಲಿದ್ದರೆ ಅದು ಕೋಪವನ್ನು, ಅದರ ಜೊತೆ ಮುಖವೂ ಕೆಂಪಾಗಿದ್ದರೆ ಇನ್ನೂ ಹೆಚ್ಚಿನ ಕೋಪವನ್ನು, ಹುಬ್ಬು, ಕಣ್ಣು ಮೇಲಕ್ಕೇರಿ ಅಂಡಾಕಾರವಾಗಿ ಬಾಯಿ ತೆರೆದುಕೊಂಡಿದ್ದರೆ ಅದು ಅಚ್ಚರಿಯನ್ನು, ಭಾವೋದ್ವೇಗದಿಂದ ಮಾತೇ ಹೊರಡದ ಭಾವನೆಯನ್ನು (ಮಾತೇ ಇಲ್ಲ ಅಂದಮೇಲೆ ಬಾಯಿ ಏಕೆ ಬೇಕು ಅಲ್ವಾ) ವ್ಯಕ್ತಪಡಿಸುತ್ತವೆ.

ಪ್ರತಿಯೊಂದು ಇಮೋಜಿ ಬಳಸಬೇಕಾದರೆ ಅದು ಏನನ್ನು ಸೂಚಿಸುತ್ತದೆ ಎಂದು ತಿಳಿದುಕೊಂಡು ಬಳಸುವುದು ಉತ್ತಮ. ಏಕೆಂದರೆ ಮಾತಿನ ಸ್ಥಾನವನ್ನು ತುಂಬುವ ಈ ಭಾವನೆಗಳ ಇಮೋಜಿಗಳಿಂದ ಸಂಬಂಧಗಳು ಕುದುರಲೂಬಹುದು, ಹಳಸಲೂಬಹುದು. ಈ ಸಂದರ್ಭದಲ್ಲಿ ಸರ್ವಜ್ಞನ ಒಂದು ತ್ರಿಪದಿ ನೆನಪಾಗುತ್ತಿದೆ.

ಇಮೋಜಿ ಯುಗದಲ್ಲಿರುವುದರಿಂದ ಆಯಾ ತ್ರಿಪದಿಯನ್ನು (ಸರ್ವಜ್ಞನಿಗೆ ಕ್ಷಮೆ ಕೋರುತ್ತಾ) ಹೀಗೆ ಬದಲಿಸಬಹುದು:

ಇಮೋಜಿಯಿಂ ನಡೆನುಡಿಯು |
ಇಮೋಜಿಯಿಂ ಹಗೆ ಕೊಲೆಯು |
ಇಮೋಜಿಯಿಂ ಸರ್ವ ಸಂಪದವು, ಲೋಕಕ್ಕೆ |
ಇಮೋಜಿಯೇ ಮಾಣಿಕವು ಸರ್ವಜ್ಞ ||

ತಪ್ಪು ಇಮೋಜಿಗಳು ಸೃಷ್ಟಿಸುವ ಅವಾಂತರ ಅಷ್ಟಿಷ್ಟಲ್ಲ. ಒಂದು ಸಲ ವಾಟ್ಸಾಪ್ ಗ್ರೂಪ್‌ನಲ್ಲಿ ಅಡ್ಮಿನ್ ಅವರಿಂದ ದುಃಖಕರ ಸಂದೇಶ ಬಂತು. ಅದು ಹೀಗಿತ್ತು. 'ಅನಾರೋಗ್ಯದಿಂದ ಬಳಲುತ್ತಿದ್ದ... ಅವರು ಇಂದು ಬೆಳಿಗ್ಗೆ ನಮ್ಮನ್ನೆಲ್ಲ ಅಗಲಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ'. ಅಗಲಿದ ಚೇತನಕ್ಕೆ ಗ್ರೂಪ್‌ನ ಬಹುತೇಕ ಸದಸ್ಯರು ತಮ್ಮ ತಮ್ಮ ಭಾವನೆಗಳನ್ನು ಸ್ಪಂದಿಸಿದರು. ಜಾಸ್ತಿ ಖಾಲಿ ಸಮಯವಿದ್ದವರು ಅಗಲಿದ ಚೇತನದ ಬಗ್ಗೆ ಪುಟಗಟ್ಟಲೆ ಬರೆದರೆ, ಸ್ವಲ್ಪ ಖಾಲಿ ಸಮಯವಿದ್ದವರು ಒಂದೆರಡು ಒಳ್ಳೆಯ ಮಾತುಗಳನ್ನು ಬರೆದರು. ಸಮಯದ ಅಭಾವವಿದ್ದವರು ದುಃಖತಪ್ತ ಇಮೋಜಿ ಹಾಕಿ ಕೈ ತೊಳೆದುಕೊಂಡರು. ಪಾಪ ಅದರಲ್ಲಿ ಒಬ್ಬರು ಗದ್ಗದಿತನಾದ ಇಮೋಜಿ ಒತ್ತಲು ಹೋಗಿ